# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 20.12.2010**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ: 20.12.2010 ರಂದು ಬೆಳಿಗ್ಗೆ 10.00 ಗಂಟೆಗೆ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸಂಬಂಧಪಟ್ಟ ದಾಸಪ್ಪ ಆಸ್ಪತ್ರೆಗೆ ಭೇಟಿ ನೀಡಿ ಸಂಬಂಧಪಟ್ಟ ಕಛೇರಿಗಳನ್ನು ತಪಾಸಣೆ ಮಾಡಿದ್ದು, ತಪಾಸಣೆ ಸಮಯದಲ್ಲಿ ಕಛೇರಿಗಳಲ್ಲಿನ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸಲಾಯಿತು. ದಾಸಪ್ಪ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗ ಮತ್ತು ನಗರ ಕುಟುಂಬ ಕಲ್ಯಾಣ ಕೇಂದ್ರವಿದ್ದು, ಎರಡು ವಿಭಾಗದಲ್ಲೂ ಒಬ್ಬರೇ ವೈದ್ಯರು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ. ಸದರಿ ಆಸ್ಪತ್ರೆಯಲ್ಲಿರುವ ಶೌಚಾಲಯವನ್ನು ಅಲ್ಲಿನ ಸಿಬ್ಬಂದಿ ಸರಿಯಾಗಿ ಸ್ವಚ್ಛ ಮಾಡದೇ ಇರುವುದು ತಿಳಿದುಬಂದಿರುತ್ತದೆ. ಅಲ್ಲಿನ ಸಿಬ್ಬಂದಿಗಳು ಗುರುತಿನ ಚೀಟಿಯನ್ನು ಧರಿಸದಿರುವುದು ಕಂಡುಬಂತು. ಆಸ್ಪತ್ರೆಯಲ್ಲಿರುವ ಬೆಡ್‌ಗಳು ತುಂಬಾ ಹದಗೆಟ್ಟ ಪರಿಸ್ಥಿತಿಯಲ್ಲಿದ್ದು, ಅವುಗಳನ್ನು ಜರೂರಾಗಿ ಬದಲಾಯಿಸುವಂತೆ ಸಂಬಂಧಪಟ್ಟ ವೈದ್ಯರಿಗೆ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರು ಸೂಚಿಸಿರುತ್ತಾರೆ. ಸದರಿ ಕಟ್ಟಡವನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಕಂಡುಬಂದಿರುತ್ತದೆ. ಹಾಗೂ ಸದರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಪರ್ಕ ಕಾರ್ಯಕರ್ತೆಯರು ನಿರ್ವಹಿಸಿರುವ ಕಾರ್ಯದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡದೇ ಇರುವುದು ಕಂಡುಬಂದಿರುತ್ತದೆ.

ಸೊಳ್ಳೆ ನಿಯಂತ್ರಣ ವಿಭಾಗಕ್ಕೆ ಭೇಟಿ ಕೊಟ್ಟು ಪರಿಶೀಲಿಸಲಾಗಿ ಅಲ್ಲಿ ಇಬ್ಬರು ನಾಲ್ಕನೇ ದರ್ಜೆ ನೌಕರರನ್ನು ಬಿಟ್ಟರೆ ಬೇರೆ ಯಾವ ಅಧಿಕಾರಿ/ಸಿಬ್ಬಂದಿಗಳು ಕಛೇರಿಗೆ ಹಾಜರಾಗಿರುವುದಿಲ್ಲ. ಅಲ್ಲಿನ ಅಲ್‌ಮೆರಾಗಳನ್ನು ಮಾನ್ಯ ಆಯುಕ್ತರ ಕಛೇರಿಯ ವ್ಯವಸ್ಥಾಪಕರಿಂದ ಸೀಲ್ ಮಾಡಿಸಲಾಗಿದೆ. ಸದರಿ ಕಟ್ಟಡವನ್ನು ಕೂಡ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ.

ಅಲ್ಲಿರುವ ವೈದ್ಯರ ವಸತಿ ಗೃಹಗಳನ್ನು ಪರಿಶೀಲಿಸಲಾಯಿತು. ಸದರಿ ವಸತಿ ಗೃಹಗಳಲ್ಲಿ ವೈದ್ಯರ ಬದಲು, ಬೇರೆ ಕಛೇರಿಯ ವಾಹನ ಚಾಲಕರು ವಾಸವಾಗಿರುವುದು ಕಂಡುಬಂದಿದೆ. ಔಷಧಿಗಳ ಉಗ್ರಾಣವನ್ನು ಪರಿಶೀಲಿಸಲಾಯಿತು. ಉಗ್ರಾಣದಲ್ಲಿರುವ ಔಷಧಿ ಮತ್ತು ಇತರೇ ವಸ್ತುಗಳನ್ನು ಪರಿಶೀಲಿಸಲಾಯಿತು. ದಾಸ್ತಾನು ಪುಸ್ತಕವನ್ನು ಪರಿಶೀಲಿಸಲಾಗಿ ದಾಸ್ತಾನು ಪುಸ್ತಕಕ್ಕೂ, ದಾಸ್ತಾನು ಮಳಿಗೆಯಲ್ಲಿರುವ ದಾಸ್ತಾನಿಗೂ ತುಂಬಾ ವ್ಯತ್ಯಾಸ ಕಂಡುಬಂದಿರುತ್ತದೆ.

ಕೊನೆಯದಾಗಿ ಮೈಸೂರು ರಸ್ತೆಯ ಕಸ್ತೂರಬಾ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಕಾಲೇಜು ಮತ್ತು ಪ್ರೌಢಶಾಲಾ ವಿಭಾಗಗಳಲ್ಲಿ ಶಿಕ್ಷಕರ ಕೊರತೆ ಇರುವುದಾಗಿ, ಖಾಲಿ ಇರುವ ಹುದ್ದೆಗಳಿಗೆ ನಿವೃತ್ತ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಂಡಿರುವುದಾಗಿ ಅಲ್ಲಿನ ಪ್ರಾಂಶುಪಾಲರು ತಿಳಿಸಿರುತ್ತಾರೆ.

ತಪಾಸಣೆ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ, ಸದಸ್ಯರುಗಳಾದ ಶ್ರೀ ಆರ್. ಚಂದ್ರಶೇಖರಯ್ಯ, ಶ್ರೀ ಮೋಹನ್ ಕುಮಾರ್, ಶ್ರೀ ಮುರುಗೇಶ್ ಮೊದಲಿಯಾರ್, ಶ್ರೀಮತಿ ಫೌಜೀಯ ಬೇಗಂ, ಶ್ರೀಮತಿ ವಸಂತಕುಮಾರಿ, ಶ್ರೀಮತಿ ಸುಮಿತ್ರಾ ವಿಜಯಕುಮಾರ್, ಶ್ರೀಮತಿ ಲಲಿತಾ ಮುಕುಂದರಾವ್, ಶ್ರೀಮತಿ ಸರಸ್ವತ್ತಮ್ಮ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 20.12.2010**

## ವಾರ್ಡ್-47 ದೇವರ ಜೀವನಹಳ್ಳಿಯ ಕೊಳಚೆ ಪ್ರದೇಶಗಳಿಗೆ ಉಪ ಮಹಾಪೌರರ ಭೇಟಿ

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಶ್ರೀ ಎನ್.ದಯಾನಂದ್ ರವರು ಪೂರ್ವ ವಲಯ ವ್ಯಾಪ್ತಿಯ ವಾರ್ಡ್-47ರ ದೇವರ ಜೀವನಹಳ್ಳಿಯ ಸ್ಲಂ ಪ್ರದೇಶಗಳಿಗೆ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಸಂಪತ್‌ರಾಜ್ ರವರೊಂದಿಗೆ ತಪಾಸಣೆಯನ್ನು ಕೈಗೊಂಡು ಪರಿಶೀಲಿಸಿದರು.

ಕಳೆದ 27 ವರ್ಷಗಳಿಂದ ರೋಷನ್ ನಗರದಲ್ಲಿ ಜೀವನ ನಡೆಸುತ್ತಿದ್ದೇವೆ. ಆದರೆ ನಮಗೆ ಯಾವುದೇ ರೀತಿಯ ಕುಡಿಯುವ ನೀರು, ವಿದ್ಯುತ್, ಶೌಚಾಲಯದಂತಹ ಸೌಲಭ್ಯಗಳು ಹಾಗೂ ಉತ್ತಮವಾದ ಅಂಗನವಾಡಿ ಕಟ್ಟಡವನ್ನು ಒದಗಿಸಿರುವುದಿಲ್ಲ ಎಂದು ತಮ್ಮ ಕಷ್ಟಗಳನ್ನು ಉಪ ಮಹಾಪೌರರಲ್ಲಿ ಹೇಳಿಕೊಂಡರು. ಅದಕ್ಕೆ ಸ್ಪಂದಿಸಿದ ಉಪ ಮಹಾಪೌರರು ಕೂಡಲೇ ನನ್ನ ಅನುದಾನದಿಂದ ಬೋರ್‌ವೆಲ್ ಮತ್ತು ಶೌಚಾಲಯಗಳನ್ನು ಕಟ್ಟಿಸಿ ಕೊಡಲು ಅಪರ ಆಯುಕ್ತರಾದ ಶ್ರೀ ಶಿವಶಂಕರ್ ರವರಿಗೆ ತಿಳಿಸಿದರು.

ಸುಮಾರು 1500 ತಾತ್ಕಾಲಿಕ ಶೆಡ್‌ನಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮನೆಗಳನ್ನು ಕಟ್ಟಿಸಿ ಕೊಡುವ ಬಗ್ಗೆ ಆದಷ್ಟು ಬೇಗ ಸ್ಲಂ ಬೋರ್ಡ್ ನವರೊಂದಿಗೆ ಹಾಗೂ ಸ್ಥಳೀಯ ಶಾಸಕರು, ಪಾಲಿಕೆ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸುತ್ತಾ, ನಿವಾಸಿಗಳಿಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಪಾಲಿಕೆ ವತಿಯಿಂದ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒದಗಿಸಿ ಕೊಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪಾಲಿಕೆಯ ಆರೋಗ್ಯ ವಿಭಾಗದಿಂದ ಈ ಸ್ಲಂಗಳಲ್ಲಿ ಸ್ಪ್ರೇ ಹಾಗೂ ಫಾಗಿಂಗ್ ಅನ್ನು ನಿಯಮಿತವಾಗಿ ಮಾಡಿಸಲು ಹಾಗೂ ಕಸವನ್ನು ಸಮರ್ಪಕವಾಗಿ ವಿಲೇವಾರಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆರೋಗ್ಯ ವೈದ್ಯಾಧಿಕಾರಿಯವರಿಗೆ ಸೂಚಿಸಿದರು.

ಡಿ.ಜಿ. ಹಳ್ಳಿಯ ರೋಷನ್ ನಗರ ಹಾಗೂ ದೊಡ್ಡಣ್ಣ ನಗರದಲ್ಲಿ ಶೇಕಡ 22.75 ಅನುದಾನದಡಿಯಲ್ಲಿ ನಿರ್ಮಿಸುತ್ತಿರುವ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಒಟ್ಟು 204 ಮನೆಗಳ ನಿರ್ಮಾಣದಲ್ಲಿ 24 ಮನೆಗಳು ಪೂರ್ಣಗೊಂಡಿದ್ದು, 52 ಮನೆಗಳ ನಿರ್ಮಣ ಪ್ರಗತಿಯಲ್ಲಿರುವ ಬಗ್ಗೆ ಮಾಹಿತಿಯನ್ನು ಪಡೆದ ಉಪ ಮಹಾಪೌರರು ಉತ್ತಮ ಗುಣಮಟ್ಟದ ಕಟ್ಟಡ ಸಾಮಾಗ್ರಿಗಳನ್ನು ಬಳಸಿ, ಮನೆಗಳನ್ನು ನಿರ್ಮಿಸಿಕೊಡಲು ಹಾಗೂ ರಸ್ತೆಗಳನ್ನು ನಿರ್ಮಿಸಿ ಬದಿಯಲ್ಲಿರುವ ಮೋರಿಗಳಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಿ, ದುರಸ್ತಿಗೊಳಿಸಬೇಕೆಂದು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಸೋಮಶೇಖರ್, ಮುಖ್ಯ ಅಭಿಯಂತರರು (ಪೂರ್ವ) ಹಾಗೂ ಕಾರ್ಯಪಾಲಕ ಅಭಿಯಂತರರಾದ ಶ್ರೀ ರಾಮಾಂಜನೇಯ, ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ ಶ್ರೀ ಗೋಪಾಲ್ ಗೌಡ ಮತ್ತು ಇನ್ನಿತರ ಪಾಲಿಕೆಯ ಅಧಿಕಾರಿಗಳು ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 20.12.2010**

## ***ಪಾಲಿಕೆಯ ಕಾ.ಪಾ.ಅ-ಜಯನಗರ ವಿಭಾಗ ಕಛೇರಿ ಸ್ಥಳಾಂತರ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ಕಾರ್ಯಪಾಲಕ ಅಭಿಯಂತರರು (ಜಯನಗರ) ವಿಭಾಗ ಕಛೇರಿಯು ಬಿ.ಬಿ.ಎಂ.ಪಿ. ಕಛೇರಿ ಕಟ್ಟಡ 1ನೇ ಮಹಡಿ, ಸೌತ್ ಎಂಡ್ ಸರ್ಕಲ್, ಜಯನಗರ 2ನೇ ಬಡಾವಣೆ, ಬೆಂಗಳೂರು-11 ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈಗ ಈ ಕಛೇರಿಯನ್ನು 18ನೇ ಮುಖ್ಯರಸ್ತೆ, 39ನೇ ಅಡ್ಡರಸ್ತೆ, ಜಯನಗರ 4ನೇ 'ಟಿ' ಬ್ಲಾಕ್, ಬೆಂಗಳೂರು-41 ಇಲ್ಲಿಗೆ ಸ್ಥಳಾಂತರಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಜಯನಗರ) ವಿಭಾಗ ರವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಂಡಿರುವ ಕಛೇರಿಯನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**